**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ**

**ವಿಶೇಷ ಮೊಕದ್ದಮೆ ಸಂಖ್ಯೆಃ- 816/2021**

**ಪ್ರಾಸಾಃ- 32 ಚಾಸಾಃ- 48**

| | | |
|---|---|---|
| ಸಾಕ್ಷಿಯ ಹೆಸರು | : | ಕೆ.ನಾಗರಾಜ್ |
| ತಂದೆಯ ಹೆಸರು | : | ಲೇಟ್ ಕೆ. ತಿಮ್ಮಪ್ಪ |
| ವಯಸ್ಸು | : | 45 ವರ್ಷ |
| ವೃತ್ತಿ | : | ಎ ಆರ್ ಎಸ್ ಐ, |
| ವಾಸಸ್ಥಳ | : | ಬಳ್ಳಾರಿ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 21.8.2025**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

ನಾನು 1996 ರಿಂದ ಇಲ್ಲಿಯವರೆಗೆ ಡಿ ಆರ್ ಕೇಂದ್ರ ಸ್ಥಾನದಲ್ಲಿ ಮುಖ್ಯ ಪೇದೆಯೆಂದು ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಚಾಸಾ 52 ಮತ್ತು 53 ರವರು ನನ್ನ ಮೇಲಾಧಿಕಾರಿಗಳು. ನಾನು ಈಗ ನೋಡುತ್ತಿರುವ ನಿಪಿ-70, 72, 74, 86, 87, 90, 37, 93, 8, 56 ಪಂಚನಾಮೆಗಳನ್ನು ಮಾಡುವ ಸಮಯದಲ್ಲಿ ಹಾಜರು ಇದ್ದು ಸದರಿ ಪಂಚನಾಮೆಯ ಪ್ರಕ್ರಿಯೆಯ ಫೋಟೋಗಳನ್ನು ತೆಗೆದಿದ್ದೆ. ನಾನು ಸದರಿ ಪಂಚನಾಮೆಗಳ ಸಮಯದಲ್ಲಿ ತೆಗೆದ ಪೋಟೋಗಳನ್ನು ಈಗ ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ. ಸದರಿ ಪೋಟೋಗಳನ್ನು ಈಗಾಗಲೇ ನಿಪಿ-73, 76, 77, 88, 89, 91, 92, 38, 94, 95, 9, 9(ಎ), 57, 58, 11 ಎಂದು ಗುರುತಿಸಲಾಗಿದೆ. ನಿಪಿ-8, 37, 56, 70, 72, 74, 86, 87, 90 ಮತ್ತು 93 ರಲ್ಲಿ ನನ್ನ ಸಹಿಗಳು ಇವೆ. ಸಾಕ್ಷಿಯ ಸಹಿಗಳನ್ನು ನಿಪಿ-8(ಡಿ), ನಿಪಿ-37(ಸಿ), ನಿಪಿ-56(ಸಿ), ನಿಪಿ-70(ಬಿ), ನಿಪಿ-72(ಬಿ), ನಿಪಿ-74(ಬಿ), ನಿಪಿ-86(ಬಿ), ನಿಪಿ-87(ಬಿ), ನಿಪಿ-90(ಬಿ) ಮತ್ತು ನಿಪಿ-93(ಬಿ) ಎಂದು ಗುರುತಿಸಲಾಯಿತು. ನಮ್ಮ ಇಲಾಖೆಯ ಸೋನಿ ಕ್ಯಾಮೆರಾದಲ್ಲಿ ಸದರಿಪೋಟೋಗಳನ್ನು ತೆಗೆದಿದ್ದೆ. ಸದರಿ ಪೋಟೋಗಳನ್ನು ತೆಗೆದ ಬಗ್ಗೆ ನಾನು ಭಾರತೀಯ ಸಾಕ್ಷ್ಯ ಅಧಿನಿಯಮ 65 ಬಿ ಅಡಿಯಲ್ಲಿ ಎರಡು ಪ್ರಮಾಣ ಪತ್ರಗಳನ್ನು ನೀಡಿದ್ದೇನೆ. ಸದರಿ ಪ್ರಮಾಣ

ಪತ್ರಗಳನ್ನು ನಿಪಿ-107 ಮತ್ತು 108 ಎಂದು ಹಾಗೂ ಸಾಕ್ಷಿಯ ಸಹಿಗಳನ್ನು ನಿಪಿ-107(ಎ) ಮತ್ತು ನಿಪಿ-108(ಎ ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ್ ಆರ್ ಪಿ ವಕೀಲರಿಂದಃ**

ಫೋಟೋ ಗ್ರಫಿಯ ಬಗ್ಗೆ ನನಗೆ ಬೆಂಗಳೂರಿನಲ್ಲಿ ಟ್ರೈನಿಂಗ್ ಆಗಿತ್ತು. ಈ ಬಗ್ಗೆ ಸರ್ಟಿಫಿಕೇಟ್ ಹಾಜರು ಪಡಿಸಿಲ್ಲ. ನನಗೆ ಪಂಚನಾಮೆ ಸಮಯದಲ್ಲಿ ಹಾಜರು ಇದ್ದು ಫೋಟೋ ತೆಗೆಯಲು ಮೇಲಾಧಿಕಾರಿಗಳು ಮೇಲಲ್ಲಿ ಮೆಮೋ ಕಳುಹಿಸಿದ್ದರು. ಸದರಿ ಮೆಮೋವನ್ನು ನಾನು ಹಾಜರುಪಡಿಸಿಲ್ಲ. ನಾನು ನಿಪಿ-8, 37, 56, 70, 72, 74, 86, 87, 90 ಮತ್ತು 93 ರಂತೆ ಪಂಚನಾಮೆಗಳನ್ನು ಮಾಡುವ ಸಮಯದಲ್ಲಿ ಹಾಜರು ಇದ್ದೆ ಮತ್ತು ಆ ಸಮಯದಲ್ಲಿನಿಪಿ-73, 76, 77, 88, 89, 91, 92, 38, 94, 95, 9, 9(ಎ), 57, 58, 11 ರಂತೆ ಪೋಟೋಗಳನ್ನು ತೆಗೆದಿದ್ದೆ ಎಂದರೆ ಸರಿಯಲ್ಲ. ನಾನು ಯಾವುದೇ ಪಂಚನಾಮೆ ಸಮಯದಲ್ಲಿ ಹಾಜರು ಇರಲಿಲ್ಲ ಎಂದರೆ ಸರಿಯಲ್ಲ. ನಾನು ಮೇಲಾಧಿಕಾರಿಗಳ ಮಾತನ್ನು ಕೇಳಿಕೊಂಡು ನಿಪಿ-107 ಮತ್ತು 108 ರಂತೆ ಸುಳ್ಳು ಪ್ರಮಾಣ ಪತ್ರವನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೆ ಪೋಟೋಗಳನ್ನು ತೆಗೆದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

ಓ. ಹೇ. ಕೆ. ಸರಿ ಇದೆ.

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**